**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.296/2018**

(ಪ್ರಾ.ಸಾ.4 / ಚಾ.ಸಾ.7)

ತಾಃ 16-08-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ವಿಜಯಕುಮಾರ್

ತಂದೆಯ ಹೆಸರು : ಜಿ.ಮುನಿಯಪ್ಪ
ವಯಸ್ಸು : 52 ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ಚಿಕ್ಕಕೊಂಡಹಳ್ಳಿ

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

4 ಮತ್ತು 6ನೇ ಆರೋಪಿತರ ಪರಿಚಯ ಇದೆ. ಅವರು ನಮ್ಮ ಊರಿನವರು. ಉಳಿದ ಆರೋಪಿತರ ಪರಿಚಯ ಇಲ್ಲ. ಆರೋಪಿತರ ಮೇಲೆ ಯಾವ ಪ್ರಕರಣದ ದಾಖಲಾಗಿದೆ ಗೊತ್ತಿಲ್ಲ. ಚಿಕ್ಕಕೊಂಡಹಳ್ಳಿ ಹಾಗೂ ತಿಮ್ಮಶೆಟ್ಟಿಹಳ್ಳಿಗೆ ಸುಮಾರು 40-50 ಕಿ.ಮೀಟರ್ ಅಂತರ ಇದೆ. ಚಾಸಾ-1 ರವರ ಪರಿಚಯ ಇರುವುದಿಲ್ಲ. ಮೃತ ಕವಿತಾಳ ಪರಿಚಯ ಇರುವುದಿಲ್ಲ. ಆದರೆ ಕವಿತಾ ಫ್ಯಾಮಿಲಿ ಡಾಬಾವನ್ನು ನೋಡಿದ್ದೇನೆ. ಚಾಸಾ-3, 4 ರ ಪರಿಚಯ ಇಲ್ಲ. ಚಾಸಾ-5 ರ ಪರಿಚಯ ಇದೆ. ಮೃತ ಕವಿತಾಳಿಗೆ ಹಾಗೂ ಚಾಸಾ-1 ನಿಗೆ ಏನಾಗಿತ್ತು ಗೊತ್ತಿಲ್ಲ. ಮೃತ ಕವಿತಾಳು ಹೇಗೆ ಮೃತಪಟ್ಟಿರುತ್ತಾಳೆ ಗೊತ್ತಿಲ್ಲ. ಪೋಲಿಸರು ನನ್ನನ್ನು ವಿಚಾರಿಸಿರುವುದಿಲ್ಲ. ನನ್ನ ಹೇಳಿಕೆಯನ್ನು ಪಡೆದಿಲ್ಲ. ಪ್ರಕರಣದ ಕುರಿತು ಮಾಹಿತಿ ಇಲ್ಲ. ಪೋಲಿಸರು ನನ್ನನ್ನು ಕರೆಸಿ ವಿಚಾರಣೆ ಮಾಡಿರುವುದಿಲ್ಲ. ನಾನು ವ್ಯವಸಾಯ ಹಾಗೂ ಸಣ್ಣಪುಟ್ಟ ಸೈಟ್‌ಗಳ ವ್ಯವಹಾರ ಮಾಡುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯ ಕಲಂ161 ರ ಅಡಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-**

ದಿನಾಂಕ 18-11-2017 ರಂದು ನಂದಗುಡಿ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ವಿಚಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ನಾನು ಚಿಕ್ಕೊಂಡಹಳ್ಳಿಯಲ್ಲಿ ವ್ಯವಸಾಯ ಹಾಗೂ ರಿಯಲ್ ಎಸ್ಟೇಟ್ ಮಾಡುತ್ತೇನೆ ಎಂದು ಹಾಗೂ 1ನೇ ಆರೋಪಿಯ ಪರಿಚಯದವನು ಎಂದು ಚಿಕ್ಕೊಂಡಹಳ್ಳಿಯ ಕವಿತಾ ಡಾಬಾದ ಜಮೀನನ್ನು ನಾರಾಯಣಪ್ಪ ಕೊಂಡುಕೊಂಡಿದ್ದನು, ಮೃತ ಕವಿತಾ ಹಾಗೂ ಚಾಸಾ-1 ರವರು ಜಾಗವನ್ನು ಬಿಟ್ಟು ಕೊಡದ ಕಾರಣ ನಾನು ಮತ್ತು 1 ಮತ್ತು 4ನೇ ಆರೋಪಿ ಸೇರಿಕೊಂಡು ಘಟನೆಯ 15 ದಿನಗಳ ಹಿಂದೆ ಡಾಬಾದ ಬಳಿ ಹೋಗಿ ಡಾಬಾ ಜಮೀನನ್ನು 1ನೇ ಆರೋಪಿಗೆ ಬಿಟ್ಟು ಕೊಡಿ ಏನಾದರೂ ಸಮಸ್ಯೆ ಇದ್ದರೆ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಿ ಎಂದು ಹೇಳಿ ಬಂದಿದ್ದೆವು ಎಂದು ಪೋಲಿಸರ ಮುಂದೆ ಹೇಳಿದ್ದೆನು ಎಂದರೆ ಸರಿಯಲ್ಲ. ದಿನಾಂಕ 17-11-2017 ರಂದು ಸಂಜೆ ನಮ್ಮೂರಿನ 1 ಮತ್ತು 4ನೇ ಆರೋಪಿತರು ಡಾಬಾವನ್ನು ಖಾಲಿ ಮಾಡಿಸಲು ಅವರ ಕಡೆ ಜನರನ್ನು ಕರೆದುಕೊಂಡು ಬರುತ್ತಿದ್ದಾನೆ ಅವರಿಗೆ ಸಮಾಧಾನ ಹೇಳೋಣ ಬಾ ಎಂದು ಕರೆದನು ನಾನು 4ನೇ ಆರೋಪಿ ಕವಿತಾ ಡಾಬಾದ ಬಳಿ ಹೋಗಿದ್ದೆವು ಸ್ವಲ್ಪ ಸಮಯದ ನಂತರ 1ನೇ ಆರೋಪಿ, 3 ಮತ್ತು 2ನೇ ಆರೋಪಿ ಅಲ್ಲಿಗೆ ಬಂದ್ದರು. ನಾವು ಅಲ್ಲಿ ನಿಂತುಕೊಂಡು ಮಾತನಾಡುತ್ತಿದ್ದಾಗ 2ನೇ ಆರೋಪಿ ಟಾಟಾ ಏ.ಸಿ. ವಾಹನ ತೆಗೆದುಕೊಂಡು ಬರುವುದಾಗಿ ಹೇಳಿ ಹೆಚ್ ಕ್ರಾಸ್ ಕಡೆಗೆ ಹೋದನು, ನಂತರ 5 ಮತ್ತು 6ನೇ ಆರೋಪಿ ಅಲ್ಲಿಗೆ ಬಂದು 5ನೇ ಆರೋಪಿಗೆ ಡಾಬಾವನ್ನು ಖಾಲಿ ಮಾಡುತ್ತಿದ್ದೇವೆ ಯಾರಾದರೂ ಬಂದರೆ ಅವರ ಕತೆ ಮುಗಿಸಲು ನಮ್ಮ ಕಡೆಯವರನ್ನು ಕರೆದುಕೊಂಡು ಬಂದಿದ್ದೇನೆ ನೀನು ಸಹ

ನನಗೆ ಸಹಾಯ ಮಾಡಬೇಕೆಂದು ಕೋರಿದನು ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ 5ನೇ ಆರೋಪಿ ಯಾರಾದರೂ ಬಂದರೆ ಒಂದು ಕೈ ನೋಡಿಕೊಳ್ಳುತ್ತೇನೆ ನೀನು ಭಯಪಡಬೇಡ ಎಂದು ಹೇಳಿದನು ನಾನು ಹೆಚ್ ಕ್ರಾಸ್‌ನಲ್ಲಿ ಮನೆಗೆ ಸಾಮಾನುಗಳನ್ನು ತೆಗೆದುಕೊಂಡು ಬರುತ್ತೇನೆ ಎಂದು ಹೇಳಿ ಹೋಗಿ ಹೆಚ್ ಕ್ರಾಸ್‌ನಲ್ಲಿ ರಸ್ತೆ ಪಕ್ಕದಲ್ಲಿನ ಒಬ್ಬ ವ್ಯಾಪಾರಸ್ಥನ ಬಳಿ ಸಾಮಾನುಗಳನುನ ತೆಗೆದುಕೊಳ್ಳುತ್ತಿದ್ದಾಗ ಚಾಸಾ-4 ಬಂದು ಕವಿತಾ ಡಾಬಾದ ಬಳಿ ಏನೋ ಗಲಾಟೆ ನಡೆಯುತ್ತಿದೆ ಜೋರಾಗಿ ಮಾತನಾಡಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದನು, ನಾನು ಆತನಿಗೆ ಡಾಬಾ ಜಮೀನಿನ ವಿಚಾರದಲ್ಲಿ 1ನೇ ಆರೋಪಿ ಹಾಗೂ ಮೃತ ಕವಿತಾ ಹಾಗೂ ಚಾಸಾ-1 ರ ನಡುವೆ ವೈಷಮ್ಯ ಇದ್ದು ಈ ವಿಚಾರದಲ್ಲಿ 1ನೇ ಆರೋಪಿ ಡಾಬಾ ಖಾಲಿ ಮಾಡಿಕೊಡಿಸಲು ಅವರ ಕಡೆಯವರನ್ನು ಕರೆದುಕೊಂಡು ಬಂದಿದ್ದಾನೆ ನಾನು ಅಲ್ಲಿಂದಲೇ ಬಂದಿದ್ದು ಎಂದು ತಿಳಿಸಿ ಸಾಮಾನುಗಳನ್ನು ತೆಗೆದುಕೊಂಡು ವಾಪಸ್ಸು ಕವಿತಾ ಡಾಬಾದ ಕಡೆ ಹೋಗಿದ್ದು , ನಾನು ಹೋಗವಷ್ಟರಲ್ಲಿ ಡಾಬಾದ ಸಾಮಾನುಗಳನ್ನು ತುಂಬಿ ಕಳುಹಿಸಿದ್ದು , ಪಕ್ಕದಲ್ಲಿ ನಿಂತುಕೊಂಡು 2, 3, 5 ಮತ್ತು 6ನೇ ಆರೋಪಿತರು ಮಾತನಾಡಿಕೊಳ್ಳುತ್ತಿದ್ದರು ಎಂದು ನಾನು ಪೋಲಿಸರ ಮುಂದೆ ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಸ್ವಲ್ಪ ಸಮಯದ ನಂತರ ಚಾಸಾ-1 , ಮೃತ ಕವಿತಾ , ಚಾಸಾ-6 ರವರು ಒಂದು ಕಾರಿನಲ್ಲಿ ಬಂದು ಯಾವನೋ ನಮ್ಮ ಡಾಬಾದಲ್ಲಿನ ಸಾಮಾನುಗಳನ್ನು ತೆಗೆದುಕೊಂಡು ಹೋಗಿರುವವನು ನಿಮಗೊಂದು ಗತಿ ಕಾಣಿಸುತ್ತೇವೆ ಎಂದು ಡಾಬಾದಲ್ಲಿದ್ದ ಮಚ್ಚನ್ನು ತೆಗೆದುಕೊಂಡು ನಮ್ಮ ಮೇಲೆ ಹಲ್ಲೆ ಮಾಡಲು ಚಾಸಾ-1 ಪ್ರಯತ್ನಿಸಿದನು, 3ನೇ ಆರೋಪಿ ತಪ್ಪಿಸಿಕೊಂಡು ಓಡಲು ಪ್ರಯತ್ನ ಪಟ್ಟಾಗ ಮೃತ ಕವಿತಾ ಆತನ ಕಣ್ಣಿಗೆ ಕಾರದಪುಡಿ ಎರಚಿದಳು ಅಲ್ಲಿಂದ ನಾನು, 4, 5, 6ನೇ ಆರೋಪಿತರು ತಪ್ಪಿಸಿಕೊಂಡು ಓಡಿಹೋದೆವು ಎಂದು ಹೇಳಿಕೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಈ ರೀತಿ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ, ಸದರಿ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ನಿಪಿ4 ರಂತೆ ಪೋಲಿಸರಿಗೆ

ಹೇಳಿಕೆ ನೀಡಿದ್ದರೂ ಆರೋಪಿತರು ಪರಿಚಯದವರಾಗಿದ್ದ ಕಾರಣ ಅವರು ಆಪ್ತರಾಗಿದ್ದ ಕಾರಣ, ಅವರೊಂದಿಗೆ ಶಾಮೀಲಾಗಿ ಅವರಿಗೆ ಶಿಕ್ಷೆಯಿಂದ ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ರಿಂದ 3 ಹಾಗೂ 5 ಮತ್ತು 6ನೇ ಆರೋಪಿ ಪರ ಶ್ರೀ. ಎಂ.ಎಸ್.ಹೆಚ್. ವಕೀಲರಿಂದಃ**

ಆರೋಪಿತರ ಪರ ವಕೀಲರು ಯಾವುದೇ ಪಾಟೀ-ಸವಾಲು ಇಲ್ಲ ಎಂದು ಹೇಳುತ್ತಾರೆ.

**ಪಾಟೀ ಸವಾಲುಃ 4ನೇ ಆರೋಪಿ ಪರ ಶ್ರೀಮತಿ.ಕೆ.ಸಿ.ಎಂ. ವಕೀಲರಿಂದಃ**

ಆರೋಪಿತರ ಪರ ವಕೀಲರು ಯಾವುದೇ ಪಾಟೀ-ಸವಾಲು ಇಲ್ಲ ಎಂದು ಹೇಳುತ್ತಾರೆ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಮೋಹನ ಬಾಡಗಂಡಿ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.